## ರಾಶೊಮನ್




ಮನುಷ್ಯನ ಮನಸ್ಸಿಗೆ ಪಾತಾಳಗರಡಿ ಹಾಕಿ ಶೋಧಿಸುವ ವಿರಳ ಕಥೆಗಾರರಲ್ಲಿ ಜಪಾನಿನ ಯೂನೊಸ್‌ಕೆ ಅಕ್‌ತಗವ ಕೂಡ ಒಬ್ಬ. ಜಪಾನಿನ ಪ್ರಮುಖ ಕಥೆಗಾರರಲ್ಲಿ ಒಬ್ಬರಾದ ಅಕ್‌ತಗವ, ತಮ್ಮ ಕಥೆಗಳಲ್ಲಿ ನಡೆಸಿರುವ ಜಪಾನಿ ಸಮಾಜ–ಸಂಸ್ಕೃತಿಯ ಶೋಧ, ಕಾಲ–ದೇಶಗಳನ್ನು ಮೀರಿ ಎಲ್ಲ ದೇಶ–ಕಾಲಕ್ಕೂ ಸಲ್ಲುವಂತಿದೆ. ಭಿನ್ನ ಪರಿಸರ–ಭಾಷೆಯ ಮೂಲಕ ಅಕ್‌ತಗವ ಮಾತನಾಡಿರುವುದು ನಮ್ಮ ಅಂತರಂಗದ ಪಿಸುಮಾತುಗಳನ್ನೇ ಅನ್ನಿಸುವಷ್ಟು ಅವರ ಕಥೆಗಳು ಪ್ರಭಾವಶಾಲಿಯಾಗಿವೆ.

ಅಕಿರಾ ಕುರುಸಾವ ನಿರ್ದೇಶಿಸಿದ ‘ರಾಶೊಮನ್’ ಸಿನಿಮಾಕ್ಕೆ ಅಕ್‌ತಗವ ಅವರ ಎರಡು ಕಥೆಗಳೇ ಮೂಲ ಎನ್ನುವುದು ಕಥೆಗಾರನ ಅಗ್ಗಳಿಕೆಗೆ ಉದಾಹರಣೆಯಾಗಿದೆ. ‘ರಾಶೊಮನ್’ ಸೇರಿದಂತೆ ಒಟ್ಟು ಹದಿನಾರು ಕಥೆಗಳು ಈ ಸಂಕಲನದಲ್ಲಿವೆ. ಪುರಾಣ, ಚರಿತ್ರೆ, ವರ್ತಮಾನಗಳು ಹಾಸುಹೊಕ್ಕಾದ ಈ ಕಥೆಗಳು ಸರಳವಾಗಿ ಕಂಡರೂ, ಪ್ರತಿ ಓದಿಗೂ ಹೊಸ ಅರ್ಥವನ್ನು ಬಿಟ್ಟುಕೊಡುವ ಕಾವ್ಯಗುಣವನ್ನು ಹೊಂದಿವೆ. ರಂಜಕ ಗುಣವೂ ಇರುವುದು ಕಥೆಗಳ ಪ್ರವೇಶಕ್ಕೆ ಅನುಕೂಲಕರವಾಗಿದೆ.

ಸಿನಿಮಾ ಬರಹಗಾರ ಹಾಗೂ ಅನುವಾದಕರಾಗಿ ಪ್ರಸಿದ್ಧರಾದ ಕೆ. ಪುಟ್ಟಸ್ವಾಮಿ ಅಕ್‌ತಗವ ಕಥೆಗಳನ್ನು ಕೇವಲ ಅನುವಾದದ ಉತ್ಸಾಹದಲ್ಲಷ್ಟೇ ಕನ್ನಡಕ್ಕೆ ತಂದಿಲ್ಲ. ಈ ಅನುವಾದದ ಹಿಂದೆ, ಸೃಜನಶೀಲ ಮನಸ್ಸೊಂದು ಕಾಲ–ದೇಶಗಳನ್ನು ಮೀರಿ ನಡೆಸಿದ ಅನುಸಂಧಾನವನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಮಹತ್ವಾಕಾಂಕ್ಷೆಯಿದೆ. ಕಥೆಗಳ ಆರಂಭದಲ್ಲಿ ಇರುವ ಅನುವಾದಕರ ಎರಡು ಬರಹಗಳು ಅಕ್‌ತಗವ ಕಥೆಗಳನ್ನು ಅರ್ಥ ಮಾಡಿಕೊಳ್ಳಲು ಉತ್ತಮ ಪ್ರವೇಶಿಕೆಯನ್ನು ಒದಗಿಸಿವೆ. ಕೃತಿಯ ಕೊನೆಯಲ್ಲಿ ನೀಡಿರುವ ಟಿಪ್ಪಣಿಗಳು ಕಥೆಗಳ ಓದನ್ನು ಮತ್ತಷ್ಟು ಆಪ್ತವಾಗಿಸುವಂತಿವೆ. ಕನ್ನಡ ಓದುಗರು ಸಂಭ್ರಮದಿಂದ ಸ್ವಾಗತಿಸಬೇಕಾದ ಕೃತಿಯಿದು.

**ಕನ್ನಡಕ್ಕೆ: ಕೆ. ಪುಟ್ಟಸ್ವಾಮಿ; ಪು: 200; ಬೆ: ₹ 200; ಪ್ರ: ಅಭಿನವ, ಬೆಂಗಳೂರು. abhinavabooks.com**

## ಅರ್ಧ ಬಿಸಿಲು ಅರ್ಧ ಮಳೆ




ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಬೋಧಿಸುವ ಸದಾಶಿವ ಸೊರಟೂರು ಅವರ ಚೊಚ್ಚಿಲ ಕಥಾಸಂಕಲನ ‘ಅರ್ಧ ಬಿಸಿಲು ಅರ್ಧ ಮಳೆ’. ಇಲ್ಲಿನ ಹತ್ತು ಕಥೆಗಳು ಯುವ ಕಥೆಗಾರನ ಬರೆಯುವ ಉತ್ಸಾಹವನ್ನು, ಸಾಮಾಜಿಕ ಕಾಳಜಿ ಹಾಗೂ ವೈಚಾರಿಕ ಎಚ್ಚರವನ್ನು ಸೂಚಿಸುವಂತಿವೆ.

ಸದಾಶಿವ ಅವರ ಕಥೆಗಳು ವಿಭಿನ್ನ ವಸ್ತುಗಳಿಂದಾಗಿ ಓದುಗರನ್ನು ಆಕರ್ಷಿಸುತ್ತವೆ. ಕಾವ್ಯಾತ್ಮಕ ಶೀರ್ಷಿಕೆಗಳೂ ಓದುಗರನ್ನು ಸೆಳೆಯುತ್ತವೆ. ಇಲ್ಲಿನ ಬಹುತೇಕ ಪಾತ್ರಗಳು ಯಾವಾಗ ಬೇಕಾದರೂ ಸ್ಫೋಟಿಸುವ ಮನಸ್ಥಿತಿಯುಳ್ಳವು. ಆ ಸ್ಫೋಟ ಬಹಿರಂಗವಾದುದೂ ಹೌದು, ಅಂತರಂಗಕ್ಕೆ ಸಂಬಂಧಿಸಿದ್ದೂ ಹೌದು. ಪಾತ್ರಗಳ ಮನಸ್ಥಿತಿಯನ್ನು ವಿಶ್ಲೇಷಿಸುವ ಕಥೆಗಾರರು ತೋರಿಸಿರುವ ಉಮೇದು ಗಮನಸೆಳೆಯುವಂತಿದೆ. ಒಂಟಿ ಹೆಣ್ಣಿನ ಸಾವನ್ನೂ ಅನಾಥವಾಗಿಸಲು ಬಿಡದ ಕಥೆಗಾರರ ನಿಲುವು ಇಲ್ಲಿನ ಕಥೆಗಳಿಗೆ ಮಾನವೀಯ ಆವರಣವನ್ನು ಕಲ್ಪಿಸಿದೆ.

‘ಬಿಸಿಲುಕೋಲು’, ‘ನೀಲಿ’, ‘ಅರ್ಧ ಮಳೆ ಅರ್ಧ ಬಿಸಿಲು’ ಕಥೆಗಳು ವಸ್ತು ಹಾಗೂ ನಿರ್ವಹಣೆಯ ಕಾರಣದಿಂದಾಗಿ ಗಮನಸೆಳೆಯುತ್ತವೆ. ವಿಭಿನ್ನ ಕಥಾವಸ್ತುವನ್ನು ಆರಿಸಿಕೊಳ್ಳುವಲ್ಲಿ ತೋರುವ ಎಚ್ಚರವನ್ನು ಕಥೆಗಳ ಕಟ್ಟುವಿಕೆಯ ನಿಟ್ಟಿನಲ್ಲೂ ಸದಾಶಿವ ಅವರು ವಹಿಸುವುದು ಅಗತ್ಯ.

**ಲೇ: ಸದಾಶಿವ ಸೊರಟೂರು, ಪು: 104; ಬೆ: ₹ 120; ಪ್ರ: ವೀರಲೋಕ, ಬೆಂಗಳೂರು. 080–69262222**